150	Itagı	10 00	Hoovına Hadagalı	Hadagalı	Bellary	
151	Gadıhallı	10 00	Tarıkere	Tarıkere	Chıkamaga luru	
152	Gokarna	10 00	Kumata	Kumata	UttaraKann ada	
153	Kamalapura	15 00	Hospet	Hospet	Balları	
154	Mannur	10 00	Afjalapura	Afjalapura	Gulbarga	
155	Kolhara	10 00	Basavana Bagevadı	Basavana Bagevadı	Bıjapura	
156	Chandraban da	9 80	Raıchur	Raıchur	Raıchur	
	Total	**1694 80**				

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1262(1751)**

ಸದಸ್ಯರ ಹೆಸರು **ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)**

ಉತ್ತರಿಸಬೇಕಾದ ಸಚಿವರು **ಶ್ರೀ ಶಶಿಕಾಂತ ಅ ನಾಯಿಕ (ತೋಟಗಾರಿಕಾ ಸಚಿವರು)**

ಅ) ಕಳೆದ 3 ವರ್ಷಗಳಿಂದ ತೋಟಗಾರಿಕಾ ಇಲಾಖೆಯಿಂದ ಸ್ಥಾಪಿಸಲ್ಪಟ್ಟಿರುವ ಶೀತಲ ಗೃಹಗಳ ಸಂಖ್ಯೆ ಎಷ್ಟು, ಇವುಗಳ ನಿರ್ಮಾಣಕ್ಕೆ ತಗಲಿರುವ ವೆಚ್ಚವೆಷ್ಟು ಹಾಗೂ ಇವುಗಳ ಸಾಮರ್ಥ್ಯವೆಷ್ಟು, ಯಾವ ಹಣದ ನೆರವಿನಿಂದ -ಇವುಗಳನ್ನು ಸ್ಥಾಪಿಸಲಾಗಿದೆ(ಜಿಲ್ಲಾವಾರು ವಿವರಗಳನ್ನು ಒದಗಿಸುವುದು),

ತೋಟಗಾರಿಕ ಇಲಾಖೆಯಿಂದ ಶೀತಲಗೃಹಗಳನ್ನು ಸ್ಥಾಪಿಸಲಾಗಿರುವುದಿಲ್ಲ

ಅ) ಸಾಕಷ್ಟು ಸಂಖ್ಯೆಯಲ್ಲಿ ಶೀತಲ ಗೃಹಗಳು ಇಲ್ಲದಿರುವುದರಿಂದ ತೋಟಗಾರಿಕಾ ಬೆಳೆಗಳು ಬಹಳ ಬೇಗ ಹಾಳಾಗುತ್ತಿದ್ದು, ರೈತರು ತೊಂದರೆಗೊಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಇ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟುವ ಸಲುವಾಗಿ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಶೀತಲಗೃಹಗಳನ್ನು ಸ್ಥಾಪಿಸುವ ಪ್ರಸ್ತಾವನ ಸರ್ಕಾರದ ಮುಂದಿದೆಯೇ,

ಈ) ಹಾಗಿದ್ದಲ್ಲಿ, ಎಲ್ಲೆಲ್ಲಿ ಸ್ಥಾಪಿಸಲಾಗುವುದು,

ಹೌದು ಶೀತಲ ಗೃಹಗಳನ್ನು ಸರ್ಕಾರದ ವತಿಯಿಂದ ಸ್ಥಾಪಿಸಲಾಗುವುದಿಲ್ಲ ಅಸಕ್ತ ಖಾಸಗಿಯವರು/ಸಹಕಾರ ಸಂಘಗಳು ಮತ್ತು ಸಂಸ್ಥೆಗಳು ಶೀತಲಗೃಹಗಳನ್ನು ಸ್ಥಾಪಿಸಲು ನೆರವು ನೀಡಲಾಗುವುದು

ಉ) ಈ ಭಾಗದಲ್ಲಿ ಶೀತಲ ಗೃಹಗಳ ವ್ಯವಸ್ಥೆಯಿಲ್ಲದ, ರೈತರು ಬೆಳೆದ ಬೆಳೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಊ) ಹಾಗಿದ್ದಲ್ಲಿ, ಶೀತಲಗೃಹಗಳನ್ನು ನಿರ್ಮಿಸಲು ಸರ್ಕಾರ ಶೀಘ್ರವಾಗಿ ಕ್ರಮ ಕೈಗೊಳ್ಳುವುದೇ?

ಪ್ರಶ್ನೆ ಸಂಖ್ಯೆ "ಇ" ರಲ್ಲಿ ಉತ್ತರಿಸಿದಂತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1264(1757)**
ಸದಸ್ಯರ ಹೆಸರು	**ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ)**
ಉತ್ತರಿಸಬೇಕಾದ ಸಚಿವರು	**ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)**

ಅ) ಸರ್ಕಾರವು ರೈತರ ಸಾಲ ಮನ್ನಾ ಮಾಡುವುದಾಗಿ ಪತ್ರಿಕೆ ಹಾಗೂ ಇತರೆ ಮಾಧ್ಯಮಗಳ ಮೂಲಕ ಹೇಳಿಕೆ ನೀಡಿದ ಪರಿಣಾಮವಾಗಿ ರೈತರು ಬ್ಯಾಂಕ್‌ಗಳಿಗೆ ಸಾಲ ಮರುಪಾವತಿ ಕಡಿಮೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು